ಈ)

(ಕೋಟಿ ರೂ.ಗಳಲ್ಲಿ)

ವರ್ಷ	ಆಯವ್ಯಯದಲ್ಲಿ ಒದಗಿಸಿರುವ ಹಣ	ಬಿಡುಗಡೆ ಮಾಡಲಾದ ಹಣ	ವೆಚ್ಚ
2007–08	1571.50	951.44	945.99
2008–09	2547.33	1710.42	1739.41 *
2009–10	2578.83	1396.08 **	1248.23 **

* ಬಿಡುಗಡೆ ಮಾಡಿದ ಹಣಕ್ಕಿಂತ ಹೆಚ್ಚು ಖರ್ಚಾಗಿರುವುದಕ್ಕೆ ಕಾರಣ ಇಂಧನ ಇಲಾಖೆಯಡಿಯಲ್ಲಿ ವಿದ್ಯುಚ್ಛಕ್ತಿ ವಿತರಣಾ ಕಂಪನಿಗಳು ಸರ್ಕಾರ ಬಿಡುಗಡೆ ಮಾಡಿದ ಹಣವಲ್ಲದೆ ತಮ್ಮ ಸ್ವಂತ ಸಂಪನ್ಮೂಲದಿಂದ ಹಿಂದುಳಿದ ತಾಲ್ಲೂಕುಗಳಿಗೆ ವೆಚ್ಚ ಮಾಡಿರುತ್ತವೆ.

** ಇಲ್ಲಿಯವರೆಗೆ

ಉ) ಸಮಿತಿಯು ವಿಶೇಷ ಅಭಿವೃದ್ಧಿ ಯೋಜನೆಯಡಿ ರಾಜ್ಯ ಮಟ್ಟದಲ್ಲಿ ಹಲವಾರು ಬಾರಿ ಹಾಗೂ ಜಿಲ್ಲಾ ಮಟ್ಟದಲ್ಲಿ ವಿವಿಧ ಜಿಲ್ಲೆಗಳಲ್ಲಿ ಪರಿಶೀಲನಾ ಸಭೆಗಳನ್ನು ನಡೆಸಿ ವಿಶೇಷ ಅಭಿವೃದ್ಧಿ ಯೋಜನೆಯಡಿ ಕೈಗೊಂಡ ಕಾಮಗಾರಿಗಳ ಸ್ಥಳ ಪರಿಶೀಲನೆ ನಡೆಸಿರುತ್ತದೆ.

ಶುಲ್ಕ ಕಟ್ಟಿದ ಫಲಾನುಭವಿಗಳಿಗೆ ಅನ್ಯಾಯವಾಗುತ್ತಿರುವುದು

681 (843) ಶ್ರೀ ರಮಾನಾಥ್ ರೈ.ಬಿ. (ಬಂಟ್ವಾಳ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಜಮೀನಿನ ಗಡಿ ಗುರುತು ಮಾಡಿಸಲು ಫಲಾನುಭವಿಗಳು ದುಬಾರಿ ಶುಲ್ಕ ಕಟ್ಟಿ 3 ತಿಂಗಳು ಕಳೆದಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ?

ಆ) ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಇ) ಭೂಮಾಪಕರನ್ನು ನೇಮಕಾತಿ ಮಾಡುವ ಪ್ರಸ್ತಾಪ ಸರ್ಕಾರದ ಮುಂದಿರುವುದೇ?

ಈ) ಇಲ್ಲದಿದ್ದಲ್ಲಿ, ಈ ವಿಳಂಬ ಪ್ರಗತಿಗೆ ಕಾರಣಗಳೇನು?

ಶ್ರೀ ಜೆ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಹೌದು.

ಆ) ಗಡಿ ನಿಗಧಿಪಡಿಸುವ ಸಂದರ್ಭಗಳಲ್ಲಿ ಹಿಡುವಳಿದಾರರಿಂದ ಶುಲ್ಕ ಪಾವತಿಸಿಕೊಳ್ಳುವ ಪದ್ಧತಿ ಇರುತ್ತದೆ.

ತತ್ಕಾಲ್ ಪೋಡಿ ಯೋಜನೆಯನ್ನು ಜಾರಿಗೊಳಿಸಿದ್ದು, ಇದರನ್ವಯ ಸ್ವೀಕರಿಸಿದ 1 ತಿಂಗಳೊಳಗೆ ಕೆಲಸ ಪೂರೈಸುವ ಉದ್ದೇಶದಿಂದ ರೂ. 500=00 ಗಳನ್ನು ನಿಗಧಿಪಡಿಸಲಾಗಿದ್ದು, ಈ ಬಗ್ಗೆ ಅರ್ಜಿ ಸ್ವೀಕರಿಸಿದ ತಕ್ಷಣ (1 ತಿಂಗಳೊಳಗೆ) ಅಳತೆ ಕೆಲಸ ಪೂರೈಸಿಕೊಡಬೇಕು. ತಪ್ಪಿದಲ್ಲಿ ಅರ್ಜಿದಾರರು ಪಾವತಿಸಿದ ಶುಲ್ಕವನ್ನು ಅನುಪಾತದ ರೀತಿಯಲ್ಲಿ ಅಧಿಕಾರಿ/ ಸಿಬ್ಬಂದಿಯವರಿಂದ ವಸೂಲು ಮಾಡಲಾಗುವುದು.

ಪರವಾನಗಿ ಭೂಮಾಪಕರ ಯೋಜನೆಯನ್ನು ಸರ್ಕಾರ ಅನುಷ್ಠಾನ ಗೊಳಿಸಿದೆ. ಇದರನ್ವಯ ಪ್ರತಿ ಅರ್ಜಿದಾರರಿಂದ ರೂ. 600/– ಗಳನ್ನು ಪಾವತಿಸಿಕೊಳ್ಳಲಾಗುತ್ತಿದೆ. ಈ ಪೈಕಿ ರೂ. 300/– ಗಳನ್ನು ಪರವಾನಗಿ ಭೂಮಾಪಕರಿಗೆ ವಿತರಿಸಿ, ಉಳಿದ ಹಣವನ್ನು ಬಾಕಿ ಇರುವ ಹಿಂದಿನ ಹಳೆ ಕಡತಗಳ ವಿಲೇವಾರಿಗೆ ಉಪಯೋಗಿಸಲಾಗುತ್ತಿದೆ.

ಇ) ಹೌದು.

ಸರ್ಕಾರದ ಪತ್ರಸಂಖ್ಯೆ: ಕಂಇ 9 ಭೂದಾಸೇ (3) 2004, ದಿನಾಂಕ: 27.7.005 ರಲ್ಲಿ ಭೂಮಾಪಕರ ಇಲಾಖೆಯಲ್ಲಿ ಖಾಲಿ ಇರುವ ಒಟ್ಟು 316 ಭೂಮಾಪಕರ ಹುದ್ದೆಗಳನ್ನು 3 ಹಂತದಲ್ಲಿ ನೇಮಕ್ಕಾತಿ ಮಾಡಿಕೊಳ್ಳಲು ಅನುಮತಿಸಿದ್ದು, ಅದರಂತೆ ಈಗಾಗಲೇ 216 ಭೂಮಾಪಕರ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲಾಗಿದೆ. ಉಳಿದ 100 ಹುದ್ದೆಗಳಿಗೆ ಸಧ್ಯದಲ್ಲಿಯೇ ನೇಮಕಾತಿ ಆದೇಶ ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಸರ್ಕಾರದ ಆದೇಶ ಸಂಖ್ಯೆ: ಕಂಇ 98 ಭೂದಾಸ 2007, ದಿನಾಂಕ: 20.2.2009 ರಲ್ಲಿ ಇಲಾಖೆಗೆ ಹೊಸದಾಗಿ 400 ಭೂಮಾಪಕರ ಹುದ್ದೆಗಳನ್ನು ತಾತ್ಕಾಲಿಕವಾಗಿ ಸೃಜಿಸಿ, ಇದರೊಂದಿಗೆ ಇಲಾಖೆಯಲ್ಲಿ ಖಾಲಿ ಇರುವುದನ್ನು ಒಟ್ಟು ಗೂಡಿಸಿ 550 ಭೂಮಾಪಕರ ಹುದ್ದೆಗಳನ್ನು ತುಂಬಲು ಸರ್ಕಾರವು ಮಂಜೂರಾತಿ ನೀಡಿರುತ್ತದೆ.

ಈ) ಇರುವುದಿಲ್ಲ.